**ಓ.ಎಸ್ ನಂಃ 81/2022**

**ಪಿ .ಡಬ್ಲ್ಯು -1**

ಸಾಕ್ಷಿಯನ್ನು ದಿನಾಂಕಃ 30.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಪಿ ಎಂ ಎಸ್ ವಕೀಲರಿಂದ**

. ಈ ದಾವಾವನ್ನು ಯಾವ ಪರಿಹಾರ ಕೋರಿ ದಾವಾ ಹೂಡಿರುತ್ತೀರಿ ಎಂದರೆ ಆಸ್ತಿ ಬೇಕು ಎಂದು ದಾವಾ ಹೂಡಿರುತ್ತೇನೆ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಾ ಅಥವಾ ಒಟ್ಟು ಕುಟುಬಂದ ಆಸ್ತಿಗಳಾ ಅಥವಾ ನಿಮ್ಮ ತಂದೆಯ ಸ್ವಯಾರ್ಜಿತ ಅಸ್ತಿಗಳಾ ಎಂದರೆ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ಈ ದಾವೆಯನ್ನು 4 ಸರ್ವೆ ನಂಬರಗಳ ಮೇಲೆ ಹಾಕಿರುತ್ತೇನೆ. ಒಟ್ಟ ಕುಟುಂಬದ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದವು ಎಂದರೆ ಗೋಪಾಲಪ್ಪ ರವರ ಹೆಸರಿನಲ್ಲಿ ಇದ್ದವು ಗೋಪಾಲಪ್ಪನವರ ತಂದೆಯ ಹೆಸರು ವೆಂಕಟಪ್ಪ . ಗೋಪಾಲಪ್ಪರವರು ಈಗ ಪೌತಿಯಾಗಿರುತ್ತಾರೆ. ಸದರಿ ಗೋಪಾಲಪ್ಪರವರು ತೀರಿಕೊಂಡು 20 ರಿಂದ 30 ವರುಷಗಳಾಗಿರುತ್ತದೆ.

ನನ್ನ ತಂದೆಯ ಹೆಸರು ಮುನಿವೆಂಕಟಪ್ಪ ನನ್ನ ತಾತನ ಹೆಸರು ವೆಂಕಟಪ್ಪ , ಗೋಪಾಲಪ್ಪ ರವರ ತಂದೆ ವೆಂಕಟಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಮುನಿವೆಂಕಟಪ್ಪ ಮತ್ತು ಗೋಪಾಲಪ್ಪ . ಗೋಪಾಲಪ್ಪ ಮತ್ತು ಮುನಿವೆಂಕಟಪ್ಪ ರವರು ವೆಂಕಟಪ್ಪ ನವರ ಮಕ್ಕಳು ಎಂದು ತೋರಿಸಲು ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ. ಗೋಪಾಲಪ್ಪ ರವರ ತಂದೆ ವೆಂಕಟಪ್ಪನವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಗೋಪಾಲಪ್ಪನವರಿಗೆ ಇಬ್ಬರು ಮಕ್ಕಳು ಎಂದರೆ ಸರಿ . ಗೋಪಾಲಪ್ಪ ರವರ ಮೊದಲನೇ ಮಗ ಮುನಿಯಪ್ಪ 2 ನೇ ಮಗ ಚಿಕ್ಕವೆಂಕಟಪ್ಪ ಎಂದರೆ ಸರಿ . ಮುನಿಯಪ್ಪನವರ ಹೆಂಡತಿ ವೆಂಕಟಮ್ಮ ಸದರಿಯವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ . ಚಿಕ್ಕವೆಂಕಟಪ್ಪನವರಿಗೆ ಮಾರಕ್ಕ 1 ನೇ ಹೆಂಡತಿ , 2 ನೇ ಹೆಂಡತಿ ಯಳಮ್ಮ ಎಂದರೆ ಸರಿ . ಸದರಿ ಮಾರಕ್ಕ ಮತ್ತು ಯಳಮ್ಮ ಈಗ ಪೌತಿಯಾಗಿರತ್ತಾರೆ. ಗೋಪಾಲಪ್ಪನವರ ಮೊದಲನೇ ಮಗ ಮುನಿಯಪ್ಪ ತೀರಿಕೊಂಡು 18 ರಿಂದ 19 ವರುಷಳಾಗಿರುತ್ತದೆ. ಸದರಿ ಮುನಿಯಪ್ಪ ರವರ ಹೆಂಡತಿ ಇರುತ್ತಾರಾ ಎಂದರೆ ಈ ದಾವಾ ಹಾಕಿದ 3 ತಿಂಗಳ ನಂತರ ತೀರಿಕೊಂಡಿರುತ್ತಾರೆ. ಸದರಿ ವೆಂಕಟಮ್ಮರವರೇ ಈ ದಾವಾವನ್ನು ಹೂಡಿರುತ್ತಾರೆ ಎಂದರೆ ಸರಿ . ಚಿಕ್ಕವೆಂಕಟಪ್ಪ ರವರು ತೀರಿಕೊಂಡು 18 ವರುಷಗಳಾಗಿರುತ್ತದೆ ಮಾರಕ್ಕ ತೀರಿಕೊಂಡು 40 ವರುಷ ಮತ್ತು ಯಳಮ್ಮ ತೀರಿಕೊಂಡು 7 ರಿಂದ 8 ವರುಷಳಾಗಿರುತ್ತದೆ.

ಮಾರಕ್ಕನಿಗೆ ಇಬ್ಬರು ಮಕ್ಕಳು ಅವರುಗಳು ಸುಬ್ರಮಣಿ ಮತ್ತು ನಾರಾಯಣಪ್ಪ . ಯಳಮ್ಮ ನವರಿಗೆ ಮಕ್ಕಳು ಇರುವುದಿಲ್ಲ. ದಾವಾ ಸ್ವತ್ತುಗಳು ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ಚಿಕ್ಕವೆಂಕಟಪ್ಪ ಮತ್ತು ವೆಂಕಟಮ್ಮ ರವರ ಹೆಸರಿನಲ್ಲೂ ಇರುತ್ತದೆ. ದಾವಾ ಆಸ್ತಿಗಳು ಚಿಕ್ಕವೆಂಕಟಪ್ಪ ಮತ್ತು ವೆಂಕಟಮ್ಮ ನವರಿಗೆ ಯಾವ ರೀತಿ ಬಂದಿರುತ್ತದೆ ಎಂದರೆ ಹೇಳಲಾಗುವುದಿಲ್ಲ. ಒಟ್ಟು ಕುಟುಂಬದ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಎಂದರೆ

ಗೋಪಾಲಪ್ಪ ರವರ ಹೆಸರಿನಲ್ಲಿ ಇರುತ್ತವೆ. ಗೋಪಾಲಪ್ಪನವರಿಗೆ ಸದರಿ ಆಸ್ತಿಗಳು ಯಾವ ರೀತಿ ಬಂದಿರುತ್ತವೆ ಎಂದರೆ ನೌಕರಿ ಮಾಡುವಾಗ ರೀ ಗ್ರಾಂಟ್ ಮೂಲಕ ಬಂದಿರುತ್ತದೆ. ಗೋಪಾಲಪ್ಪ ಮತ್ತು ವೆಂಕಟಪ್ಪ ತೋಟಿ ನೌಕರಿ ಮಾಡುತ್ತಿದ್ದರು ಅಗಾಗಿ ರೀ ಗ್ರಾಂಟ್ ಅಗಿರುತ್ತದೆ. ಸದರಿ ಗೋಪಾಲಪ್ಪ ಮತ್ತು ವೆಂಕಟಪ್ಪ ರವರು 1 ನೇ ಪ್ರತಿವಾದಿಯ ತಾತಂದಿರು ಎಂದರೆ ಸರಿ . ಮುಂದುವರೆದು ನನಗೂ ತಾತಂದಿರು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿ ನೀಡಿರುತ್ತೀರಾ ಎಂದರೆ ನೀಡಿರುತ್ತೇನೆ.

ತೋಟಿ ಮುನಿವೆಂಕಟಪ್ಪನವರಿಗೆ ದಾವಾ ಆಸ್ತಿಗಳು ರೀ ಗ್ರಾಂಟ್ ಅಗಿರುವ ಬಗ್ಗೆ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಇಲ್ಲ. ಗೋಪಾಲಪ್ಪ ಮನೆ ಯಜಮಾನನಾಗಿದ್ದ ಕಾರಣ ಅವರ ಹೆಸರಿನಲ್ಲಿ ನೀಡಿರುತ್ತಾರೆ. ಗೋಪಾಲಪ್ಪ ರವರು ಯಾವ ವರುಷದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಗೋಪಾಲಪ್ಪ ರವರು ಎಷ್ಟು ವರುಷಗಳ ಕಾಲ ಯಜಮಾನನಿಕೆ ಮಾಡಿರುತ್ತಾರೆ ಎಂದರೆ ಅವರಿಗೆ 70 ರಿಂದ 80 ವರುಷಗಳಾಗುವವರೆಗೂ ಮಾಡಿರುತ್ತಾರೆ.

ನಿಮ್ಮ ತಂದೆ ಗೋಪಾಲಪ್ಪನವರಿಗೆ ಏನಾಗಬೇಕು ಎಂದರೆ ತಮ್ಮನಾಗಬೇಕು. ದಾವಾ ಆಸ್ತಿಗಳು ನಿಮ್ಮ ತಂದೆಯ ಹಸೆರಿನಲ್ಲಿ ಮರು ಮಂಜೂರಾತಿ ಅಗಿದೆಯಾ ಎಂದರೆ ಮನೆ ಯಜಮಾನರ ಹೆಸರಿನಲ್ಲಿ ಅಗಿರುತ್ತದೆ. ದಾವಾ ಆಸ್ತಿಗಳು ಕಡವಿರೆಡ್ಡಿ ಹಳ್ಳಿ ಗ್ರಾಮಕ್ಕೆ ಸೇರಿರುತ್ತವೆ. ಸರ್ವೆ ನಂ 37 , 38 , 40 ಮತ್ತು 41 ಆಸ್ತಿಗಳು ಯಾವ ವರುಷದಲ್ಲಿ ಮರು ಮಂಜೂರಾತಿ ಅಗಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಮರು ಮಂಜೂರಾತಿಗಾಗಿ ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಬುಡ್ಡಪ್ಪ , ತಿಮ್ಮಪ್ಪ , ಹನುಮಪ್ಪ , ಮುನಿಶ್ವಾಮಿ ರವರು ತಂದೆ ಹಾಕಿರುತ್ತಾರೆ. ಮೇಲೆ ಹೇಳಿದ 4 ಜನರ ಹಸೆರುಗಳಿಗೆ ಮರು ಮಂಜೂರಾತಿ ಅಗಿದೆಯಾ ಎಂದರೆ ಅಗಿರುತ್ತದೆ. ಅವರ ಹಸೆರಿಗೆ ಅದ ಮರುಮಂಜೂರಾತಿಯ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ನೀಡಿರುತ್ತೇವೆ. ಮೇಲೆ ಹೇಳಿದ 4 ಜನರಲ್ಲಿ ನಿಮ್ಮ ತಾತ ಯಾರು ಎಂದರೆ ಗೋಪಾಲಪ್ಪ . ನಿಮ್ಮ ತಾತ ಗೋಪಾಲಪ್ಪನವರಿಗೆ ಎಷ್ಟು ಆಸ್ತಿ ಮರು ಮಂಜುರಾತಿ ಅಗಿರುತ್ತದೆ ಎಂದ 10 ರಿಂದ 12 ಎಕರೆ ಒಳಗೆ ಅಗಿರುತ್ತದೆ. ಗೋಪಾಲಪ್ಪನವರ ನಿಮ್ಮ ತಾತ ಎಂದು ತೋರಿಸಲು ವಂಶವೃಕ್ಷ ನೀಡಿರುತ್ತೀರಾ ಎಂದರೆ ನೀಡಿರುತ್ತೇನೆ.

ನಾನು 7 ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನಿಪಿ 1 ರಲ್ಲಿ ನಿಮ್ಮ ಹೆಸರು ಇದೆಯಾ ಎಂದರೆ ಇರುವುದಿಲ್ಲ. ನಿಪಿ 1 ನ್ನು ಯಾರು ಹಾಜರುಪಡಿಸಿರುತ್ತಾರೆ ಎಂದರೆ 1 ನೇ ಪ್ರತಿವಾದಿ ನೀಡಿರುತ್ತಾರೆ. ನಿಪಿ 1 ನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿಗಳಲ್ಲಿ ಯಾರು ಹಸೆರು ಇದೆ ಎಂದರೆ ಚಿಕ್ಕವೆಂಕಟಪ್ಪ ಮತ್ತು ವೆಂಕಟಮ್ಮ ರವರ ಹೆಸರು ಇರುತ್ತದೆ. ವೆಂಕಟಮ್ಮ ರವರು 1 ನೆ ೀ ಪ್ರತಿವಾದಿಯ ದೊಡ್ಡಮ್ಮ ಎಂದರೆ ಸರಿ . ಸದರಿ ಮುನಿಯಪ್ಪ ಮತ್ತು ವೆಂಕಟಮ್ಮ ನವರಿಗೆ ಮಕ್ಕಳು ಇರುವುದಿಲ್ಲ ಎಂದರೆ

ಸರಿ . ಚಿಕ್ಕವೆಂಕಟಪ್ಪ ರವರು 1 ನೇ ಪ್ರತಿವಾದಿಯ ತಂದೆ ಎಂದರೆ ಸರಿ . ಚಿಕ್ಕವೆಂಕಟಪ್ಪ ಬಿನ್ ಗೋಪಾಲಪ್ಪ ಮತ್ತು ವೆಂಕಟಮ್ಮ ಕೋಂ ಮುನಿಯಪ್ಪ ರವರಿಗೂ ನಿಮಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ 4 ಜನಕ್ಕೆ ಮರು ಮಂಜೂರಾತಿಯಾದ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಇಲ್ಲ . ಮರುಮಂಜೂರಾತಿಯಾದ ಮಕ್ಕಳ ಮತ್ತು ಮೊಮ್ಮಕ್ಕಳ ವಿವರ ಹೇಳಲಾಗುವುದಿಲ್ಲ. +

ನಿಪಿ 28 ರಲ್ಲಿ ಉದ್ದಪ್ಪ , ದಾಸಪ್ಪ ಮತ್ತು ಮುನಿಶ್ವಾಮಿ ರವರಿಗೆ ಮಾತ್ರ ಮಂಜೂರಾಗಿರುತ್ತದೆ ಎಂದರೆ ಗೋಪಾಲಪ್ಪನವರಿಗೂ ಅಗಿರುತ್ತದೆ ಎಂದು ನುಡಿಯುತ್ತಾರೆ. ನೀವು ತೋಟಿ ನೌಕರರ ವಂಶಸ್ಥರು ಹಾಗೂ ವಾರಸುದಾರಾಗಿರುವುದಿಲ್ಲ ಎಂದರೆ ಸರಿಯಲ್ಲ ಉದ್ದಪ್ಪ , ದಾಸಪ್ಪ ಮತ್ತು ಮುನಿಶ್ವಾಮಿ ರವರಿಗೆ ಎಷ್ಟು ಆಸ್ತಿ ಮಂಜೂರಾಗಿರುತ್ತದೆ ಎಂದರ ಪ್ರತಿಯೊಬ್ಬರಿಗೂ 12 ಎಕರೆ ಮಂಜೂರಾಗಿರುತ್ತದೆ. ದಾವಾ ಆಸ್ತಿಗಳು ನಿಮ್ಮ ಒಟ್ಟು ಕುಟುಬಂದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಗಳು ತೋಟಿಪಿ ಇನಾಪ್ತಿ ಸ್ವತ್ತುಗಳಾಗಿದ್ದು 1 ನೇ ಪ್ರತಿವಾದಿಯ ತಂದೆ ಹಾಗೂ ತಾತನ ಸ್ವತ್ತುಗಳು ಎಂದರೆ ಸರಿಯಲ್ಲ. ನಮ್ಮ ತಾತನ ಸ್ವತ್ತುಗಳು . ನನ್ನ ತಂದೆ ಈಗ ಪೌತಿಯಾಗಿರುತ್ತಾರೆ. ನಿಮ್ಮ ತಂದೆ ಜೀವಂತವಾಗಿರುವಾಗ ಮರು ಮಂಜೂರಾತಿ ಮಾಡುವಂತೆ ಅರ್ಜಿ ಹಾಕಿರುವುದಿಲ್ಲ ಎಂದರೆ ಗೋಪಾಲಪ್ಪ ರವರು ಹಾಕಿರುತ್ತಾರೆ. ಒಟ್ಟು ಕುಟುಂಬದಲ್ಲಿ ಹಾಕಿರುತ್ತಾರೆ . ನನ್ನ ತಾತನ ಹೆಸರು ವೆಂಕಟಪ್ಪ . ನಿಮ್ಮ ತಾತ ಮರು ಮಂಜೂರಾತಿ ಮಾಡಲು ಅರ್ಜಿ ಹಾಕಿರುತ್ತಾರಾ ಎಂದರೆ ಅಷ್ಟರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ಹಾಗುಾ ತಾತಿ ಪೌತಿಯಾದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಇಲ್ಲ.

<u>ಮುಂದುವರೆದ **ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ**

**ಇದೆ,**

ಸಹಿ/-

(ಹರೀಶ್. ಜಿ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಜೆಎಂಎಫ್ ಸಿ, ಮುಳಬಾಗಿಲು